ಕಸದ ಬುಟ್ಟಿಯಲ್ಲಿ ಏನೋ ಬಿಸಾಡಿದರು. ನಂತರ ಅವಸರ ಅವಸರವಾಗಿ ಒಂದು ರಿಕ್ಷಾದಲ್ಲಿ ಓಡಿದರು. ಇದನ್ನು ಗಮನಿಸಿದ ಸುಭಾಸ್ ಹತ್ತಿರದ ಪೋಲೀಸ್ ಠಾಣೆಗೆ ತಿಳಿಸುವ ಎಂದು ತನ್ನ ತಾಯಿಯಲ್ಲಿ ವಿನಂತಿಸಿ ಕೊಂಡ. ಆದರೆ ಅವನ ತಾಯಿ ಆತನಿಗೆ ಕಿವಿಗೊಡದೆ, ಹೆದರಿಕೊಂಡು ಬೇಗ ಬೇಗನೆ ಬಸ್ಸು ಹತ್ತಿದರು. ಏಕೆಂದರೆ ಅಲ್ಲಿ ಬಹುಷ ಅಪಯಕಾರಿ ಬಾಂಬ್ ಇರಬಹುದು ಎಂದು ಅವರು ಅನುಮಾನಗೊಂಡರು.

**a) i)** **ನಿನಗೆ ಸುಭಾಸನ ನಡತೆ ಮೆಚ್ಚಿತೆ?**

**ii)** **ಏಕೆ?**

**b) i)** **ಸುಭಾಸನ ತಾಯಿಯ ಪ್ರತಿಕ್ರಿಯೆ ಬಗ್ಗೆ ನಿನಗೆ ಏನು ಅನಿಸುತ್ತದೆ?**

**ii)** **ಏಕೆ?**

**c) i)** **ಒಂದು ವೇಳೆ ಅದೊಂದು ಸ್ಫೋಟಕ ವಸ್ತು ಎಂದು ನಿನಗೆ ತಿಳಿದಿದ್ದರೆ ನೀನು ಏನು ಮಾಡುತ್ತಿದ್ದೀ?**

**ii)** **ಸುಭಾಸ್‌ನಿಗೆ ನೀನು ನೀಡುವ ಸಲಹೆ ಏನು?**

2. ಕಮಲ ಕೂಲಿ ಕೆಲಸ ಮಾಡಿ ತನ್ನ ಇಬ್ಬರು ಮಕ್ಕಳಿಗೆ ವಿದ್ಯಾಭ್ಯಾಸ ನೀಡಿದಳು. ಅವಳ ಬಡತನ ಎಷ್ಟೆಂದರೆ ಕೆಲವೊಂದು ಸಲ ತಾನು ಉಪವಾಸ ಮಾಡಿ, ಮಕ್ಕಳಿಗೆ ಊಟ ಉಪಚಾರ ನೀಡುತ್ತಿದ್ದಳು. ಅವಳು ತನ್ನ ಮಕ್ಕಳ ಭವಿಷ್ಯಕ್ಕಾಗಿ ಹಗಲೂ ಇರುಳು ದುಡಿಯುತ್ತಿದ್ದಳು. ಈಗ ಕಮಲ ಮುದುಕಿಯಾಗಿದ್ದಾಳೆ. ಕೆಲಸ ಮಾಡಲು ಆಗುವುದಿಲ್ಲ. ಅವಳ ಇಬ್ಬರೂ ಮಕ್ಕಳು ಉತ್ತಮ ನೌಕರಿಯಲ್ಲಿದ್ದು, ತನ್ನ ಕುಟುಂಬದೊಡನೆ ಸಂತೋಷದಿಂದ ಜೀವನ ನಡೆಸುತ್ತಿದ್ದಾರೆ. "ವೃದ್ಧರ ಸೇವೆ ಮಾಡಲು ನಮಗೆ ಸಮಯವಿಲ್ಲ. ಅವರು ನಮ್ಮ ಮಾತು ಆಲಿಸುವುದಿಲ್ಲ" ಎಂಬ ನೆಪ ನೀಡಿ ಕಮಲಳನ್ನು ಅವಳ ಮಕ್ಕಳು ವೃದ್ಧಾಶ್ರಮಕ್ಕೆ ಕಳುಹಿಸಿದ್ದಾರೆ.

**a) i)** **ಕಮಲಳ ಮಕ್ಕಳ ಮನೋಭಾವನೆ ಸರಿಯೇ?**

**ii)** **ಏಕೆ?**

**b) i)** **ನೀನು ಕಮಲಳ ಮಕ್ಕಳ ಸ್ಥಾನದಲ್ಲಿದಿದ್ದರೆ ಏನು ಮಾಡುತ್ತಿದ್ದಿ? ಎರಡು ಸಲಹೆ ಕೊಡು..**

**c) i)** **ಹೆತ್ತವರನ್ನು ಪ್ರೀತಿಸುವುದು ಮಕ್ಕಳ ಕರ್ತವ್ಯವೇ?**

**ii)** **ಏಕೆ?**



## ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ

## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 10–01–2015** — **ಸಮಯ : $2^1/_2$ ಘಂಟೆ**

**ತರಗತಿ : VII** — **ಅಂಕ : 100**

**ಸೂಚನೆ:** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್ ನಂಬರ್*** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

**I. ಆವರಣದಿಂದ ಸೂಕ್ತ ಉತ್ತರ ಆರಿಸಿ ಬರೆಯಿರಿ:** **10x1=10**

1. ಸತ್ಯನಿಗೆ ____________ ವಿಷಯದಲ್ಲಿ ಮಾತ್ರ ಯಾವ ಆಸಕ್ತಿಯು ಇರಲಿಲ್ಲ.
   (ಮೌಲ್ಯಶಿಕ್ಷಣ; ಕ್ರಿಕೆಟ್; ಎಲ್ಲಾ ಪಾಠಗಳ)
2. ಇದು ಮೆದುಳಿನ ಮೌಲ್ಯಕ್ಕೆ ಉದಾಹರಣೆ ____________
   (ಪ್ರೀತಿ; ಸತ್ಯ; ಕ್ಷಮೆ)
3. ಸೂಕ್ಷ್ಮ ಭಾವನೆಗಳು ಮಾನವನ ________ ತಾನಾಗಿಯೇ ಅಂಕುರಿಸುತ್ತದೆ.
   (ಹೃದಯದಲಿ; ಮನಸ್ಸಿನಲ್ಲಿ; ನಡೆನುಡಿಯಲ್ಲಿ)
4. ಸಾಕುನಾಯಿ ಮತ್ತು ಬೀದಿ ನಾಯಿಗಳ ಕಥೆಯಿಂದ ನಾವು __________ ವನ್ನು ಕಲಿಯಬಹುದು.
   (ಸಂಪತ್ತು; ಸೌಕರ್ಯ; ಸ್ವಾತಂತ್ರ್ಯ)
5. "ನನ್ನ ಒಳ್ಳೆಯ ಮತ್ತು __________ ಸೇವಕರೇ" ಎಂದ ಯಜಮಾನ.
   (ಪ್ರೀತಿಯ; ಬುದ್ಧಿವಂತ; ಶ್ರೇಷ್ಠ)
6. ನಾವು ____________ ಗಳನ್ನು ತಪ್ಪಿಸಿಕೊಳ್ಳಬಾರದು.
   (ಅನುಭವ; ಸ್ಪರ್ಧೆ; ಅವಕಾಶ)
7. ದೇಶದ ಪ್ರಜೆಗಳಾಗಿ ಪಟ್ಟಣ ಮತ್ತು ಹಳ್ಳಿಗಳ ____________ ಕಾಪಾಡುವುದು ನಮ್ಮ ಕರ್ತವ್ಯವಾಗಿದೆ.
   (ನೈರ್ಮಲ್ಯ; ಆರೋಗ್ಯ; ಕೊಳಚೆ ರಾಶಿ)
8. ಸಂತೋಷ ಯಾವಾಗಲೂ ಅಂತರಂಗದೊಳಗಿನ ವ್ಯವಹಾರವಾಗಿದೆ ಎಂದವರು ________
   (ಲಿಂಕನ್; ಬಿಥೋವನ್; ಜಾನ್ ಪೋವೆಲ್)
9. ದೇವರು ________ ಹೃದಯದಲ್ಲಿ ಅಡಗಿಕೊಂಡಿದ್ದಾರೆ.
   (ಪ್ರಾಣಿಗಳ; ಮಾನವನ; ಹಕ್ಕಿಯ)

10. ಮರ ಕಡಿಯುವವನು ____________ ವ್ಯಕ್ತಿಯಾಗಿದ್ದನು.

(ಪ್ರಾಮಾಣಿಕ; ದುಷ್ಟ; ಕ್ರೂರ)

**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿಸಿರಿ : 10x1=10**

1. ಬಿಥೋವನ್ _______ ರಾಗಿದ್ದರು ನಮ್ಮ ಕಾಲದ ಅಪೂರ್ವ ಸಂಗೀತಗಾರರಾದರು.
2. ನಮ್ಮ ಶರೀರವನ್ನು ನಾವು _________________ ವಾಗಿಡಬೇಕು.
3. ಆಳ ಭಾವನೆಗಳುಳ್ಳ ವ್ಯಕ್ತಿ ಮಾತ್ರ ಇತರರ ________ಗಳನ್ನು ಅರ್ಥ ಮಾಡಿಕೊಳ್ಳಬಲ್ಲ.
4. ________ ಮಾನವನ ಘನತೆ, ಗೌರವವನ್ನು ಸೂಚಿಸುತ್ತದೆ.
5. ಯಶಸ್ಸಿನ ಮನುಷ್ಯನಾಗಲು ಪ್ರಯತ್ನಿಸಬೇಡ ಪ್ರತಿಯಾಗಿ _______ ಮಾನವನಾಗು.
6. "ಮದರ್, ನಾನು ನನ್ನ ________ ಗಳಲ್ಲಿ ದೇವರನ್ನು 3 ಗಂಟೆ ಹಿಡಿದು ಕೊಂಡಿದ್ದೆ.
7. ಇತರರ ಮತ್ತು ಸಮಾಜದ ಒಳಿತನ್ನು ಕಾಯಾ, ವಾಚಾ, _________ ಪ್ರವರ್ಧಿಸುವವರು ಒಳ್ಳೆಯ ಜನರು.
8. ಪ್ರತಿಯೊಬ್ಬರಲ್ಲೂ ಹುದುಗಿದ ಅನೇಕ ________ ಗಳಿವೆ.
9. ಪ್ರಾರ್ಥನೆಯು ದೇವರ ಮತ್ತು _____________ ನಡುವಿನ ಸಂಭಾಷಣೆಯಾಗಿದೆ.
10. ಸಂತೋಷ ಅದ್ಭುತ ವಸ್ತು. ನೀನು ಕೊಟ್ಟಷ್ಟು ಅದು ನಿನ್ನಲ್ಲಿ ________ ವಾಗುತ್ತದೆ.

**III. ಹೊಂದಿಸಿ ಬರೆಯಿರಿ: 5x1=5**

| | | |
|---|---|---|
| 1. ಸದ್ಗುಣಗಳು | – | ಬೆಲೆ, ಕಿಮ್ಮತ್ತು |
| 2. ಮೌಲ್ಯ | – | ಸಂತೃಪ್ತಿಯ ಸ್ಥಿತಿ |
| 3. ಮಾನವ ಜೀವಿ | – | ದುರ್ಗುಣಗಳು |
| 4. ಸಂತೋಷ | – | ಆಂತರಿಕ ಪಾವಿತ್ರ್ಯತೆ |
| 5. ಸ್ವಚ್ಛತೆ | – | ಅನುಕಂಪ |

**IV. ಈ ಕೆಳಗಿನ ವಾಕ್ಯಗಳು ಸರಿ ಅಥವಾ ತಪ್ಪು ಎಂದು ಬರೆಯಿರಿ : 5x1=5**

1. ಶಂಕರ್ ಸಲೀಮನ ಮಾತಿಗೆ ಗಮನ ಕೊಡಲಿಲ್ಲ.
2. ಒಳ್ಳೆಯ ಭಾವನೆಗಳನ್ನು ಸೂಕ್ಷ್ಮ ಭಾವನೆಗಳೆಂದು ಕರೆಯುವರು.
3. ವಿದ್ಯಾರ್ಥಿಗಳು ಶಾಲೆಯಲ್ಲಿ ವಿವಿಧ ಪಠ್ಯೇತರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು.
4. ಪ್ರಾಮಾಣಿಕ ವ್ಯಕ್ತಿ ಇತರರ ವಸ್ತುಗಳನ್ನು ಗೌರವಿಸುವುದಿಲ್ಲ.
5. ಸಂತೋಷವೆಂದರೆ ಸಂತೃಪ್ತಿಯಿಂದಿರುವ ಸ್ಥಿತಿ.



**V. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ: 10x2=20**

1. ಮೌಲ್ಯ ಎಂದರೇನು?.
2. ಇತರರಿಗೆ ಒಳಿತನ್ನು ಮಾದಲು ನನ್ನನ್ನು ಪ್ರೇರೇಪಿಸುವುದೇನು?
3. ಬೀದಿ ನಾಯಿ ಸ್ವಾತಂತ್ರ್ಯದ ಬಗ್ಗೆ ಸಾಕುನಾಯಿಗೆ ಏನನ್ನು ಹೇಳಿತು?
4. ನಮ್ಮ ಪ್ರತಿಭೆಗಳನ್ನು ಗುರುತಿಸುವುದು ಅಗತ್ಯವೇ? ಏಕೆ?
5. ಆರೋಗ್ಯ ಪ್ರಜ್ಞೆ ಎಂದರೇನು?
6. ಮೌಲ್ಯ ಶಿಕ್ಷಣದ ಪ್ರಾಮುಖ್ಯತೆಯನ್ನು ಸತ್ಯ ಯಾವಾಗ ತಿಳಿದುಕೊಂಡನು?
7. ಪ್ರಾಮಾಣಿಕತೆಯ ಸಕಾರಾತ್ಮಕ ರೂಪಗಳಾವುವು?
8. ಸಮಾಜ ಕಲ್ಯಾಣವನ್ನು ವರ್ಧಿಸುವ ಸದ್ಗುಣಗಳಾವುವು?
9. ಲಿಂಕನ್ ಮತ್ತು ಬಿಥೋವನರ ವಿಶೇಷತೆ ಏನು?
10. ಸಂತೋಷ ಅಂತರಂಗದೊಳಗಿನ ವ್ಯವಹಾರ ಎಂದರೇನು?

**VI. ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಏಳು ವಾಕ್ಯಗಳಲ್ಲಿ ಉತ್ತರಿಸಿರಿ: 4x7=28**

1. ಮಾನವ ಪ್ರೀತಿಯನ್ನು ವ್ಯಕ್ತ ಪಡಿಸುವ 5 ಭಾವನೆಗಳನ್ನು ತಿಳಿಸು ಹಾಗೆ, ವಿರುದ್ಧವಾದ 5 ಭಾವನೆಗಳನ್ನು ತಿಳಿಸು.
2. ಹೊಂದಾಣಿಕೆ ಮತ್ತು ಶಾಂತಿ ಪರಸ್ಪರ ಹೇಗೆ ಪೂರಕ?
3. ನಮ್ಮ ಸುತ್ತಮುತ್ತ ಶುದ್ಧತೆಯನ್ನು ಹೇಗೆ ಕಾಪಾಡಬಹುದು?
4. ಪ್ರತಿಭೆಗಳೆಂದರೇನು? ನಿನ್ನಲ್ಲಿರುವ ಪ್ರತಿಭೆಗಳ ಪಟ್ಟಿ ಮಾಡು. ಅವುಗಳನ್ನು ನೀನು ಹೇಗೆ ಬಳಸಿದ್ದಿ?
5. ಭಾರತದಲ್ಲಿ ಮತೀಯತೆಗೆ ಕಾರಣಗಳಾವುವು?
6. ನಿನಗೆ ಮೌಲ್ಯ ಶಿಕ್ಷಣದ ತರಗತಿಗಳು ಉಪಯುಕ್ತವಾದುವೇ? ಹೇಗೆ?

**VII. ಈ ಕೆಳಗಿನ ಎರಡು ವಿಷಯದ ಕುರಿತು ಟಿಪ್ಪಣಿ ಬರೆಯಿರಿ : 2x5=10**

1. ಪ್ರಾಮಾಣಿಕತೆ
2. ಅವಕಾಶಗಳನ್ನು ಕಳೆದುಕೊಳ್ಳಬಾರದು.
3. ಸಂತೋಷ ಒಂದು ಕ್ಷಣಿಕ ಸುಖವಲ್ಲ
4. ನೈರ್ಮಲ್ಯತೆ ಕಾಪಾಡುವುದು ನಮ್ಮೆಲ್ಲರ ಕರ್ತವ್ಯ.

**VIII. ಟಿಪ್ಪಣಿ ಓದಿ, ಪ್ರಶ್ನೆಗಳನ್ನು ಉತ್ತರಿಸಿರಿ: 2x6=12**

1. ಸುಭಾಸನು ತನ್ನ ತಾಯಿಯೊಂದಿಗೆ ಪಟ್ಟಣಕ್ಕೆ ಹೋಗಿದ್ದನು. ಅಲ್ಲಿ ಅವರು ಬಸ್ಸಿಗಾಗಿ ಕಾಯುತ್ತಿದ್ದಾಗ, ಜನರು ಕಿಕ್ಕಿರಿದು ತುಂಬಿದ ಸ್ಥಳದಲ್ಲಿ ಯಾರೋ ಇಬ್ಬರು ಅಪರಿಚಿತರು